O.S. No. 33-2014
D.W. - 5

**ದಿನಾಂಕಃ 17-09-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

***ಪಾಟೀ ಸವಾಲುಃ- ಶ್ರೀ ಅಶೋಕ್., ಮಾನ್ಯ ವಕೀಲರಿಂದ ವಾದಿಯ ಪರವಾಗಿಃ-***

ಸಾಕ್ಷಿಗೆ ಈಗ ವಾದಿಗೆ ಸಹಿ ಮಾಡಲು ಬರುತ್ತದೆಯಾ ಕೇಳಿದ್ದಕ್ಕೆ ಸಾಕ್ಷಿ ಬರುತ್ತದೆ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಮೂಲ ವಾದ ಪತ್ರವನ್ನು ತೋರೀಸಿ ಅಲ್ಲಿ ವಾದಿ ಸಹಿ ಮಾಡಿರುತ್ತಾರೆ ಎಂದು ಹೇಳಿದ್ದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ, ಸಿದ್ದಪ್ಪ ಇವರಿಗೆ ಪಿತ್ರಾರ್ಜಿತ ಸ್ವತ್ತುಗಳ ಇದ್ದವು ಎಂದರೆ ಸರಿ. ಸದರಿ ಸಿದ್ದಪ್ಪ ಇವರು ಸುಲ್ತಾನಪುರ ಗ್ರಾಮದಲ್ಲಿ ಒಂದು ಕಿರಾಣಿ ಅಂಗಡಿ ಹಾಗೂ ಹೋಟೆಲ್ ನ್ನು ಹೊಂದಿದ್ದರು ಎಂದು ಹೇಳಿದ್ದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸದರಿ ಹೋಟೇಲ್ ಹಾಗೂ ಕಿರಾಣಿ ಅಂಗಡಿಯನ್ನು ವಾದಿ ಹಾಗೂ ಸದರಿ ಸಿದ್ದಪ್ಪ ಇವರು ನಡೆಸಿಕೂಂಡುಹೋಗುತ್ತಿದ್ದರು ಎಂದರೆ ಸರಿ. ಸದರಿ ಕಿರಾಣಿ ಅಂಗಡಿ ಹಾಗೂ ಹೊಟೇಲ್ ನಿಂದ ಸಾಕಷ್ಟು ಆದಾಯ ಇತ್ತು ಎಂದರೆ ಸರಿ. ಸಾಕ್ಷಿಗೆ ಈಗ ದಾವ ಸ್ವತ್ತು ಅನುಸೂಚಿ ಎ ಮತ್ತು ಬಿ ಇವುಗಳಲ್ಲಿ ವಾದಿಗೆ ಪಾಲು ಇರುತ್ತದೆ ಎಂದು ಹೇಳಿದ್ದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸಹಾಯಕ ಆಯುಕ್ತರ ಕಛೇರಿಯಲ್ಲಿ ನಡೆದಿರುವ ಪ್ರಕರಣ ನಡೆದಿರುವುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವ ಅನೂಸೂಚಿ ಸಿ ಸ್ವತ್ತುಗಳು ನನ್ನಸ್ತ್ರೀಧನ ಸ್ವತ್ತುಗಳು ಆಗಿರುತ್ತವೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

<u>ಪಾಟೀ ಸವಾಲುಃ ಶ್ರೀ ಹೆಚ್ ಎಂ .,ಮಾನ್ಯ ವಕೀಲರಿಂದ ಡಿ-1 ಎ ಟು ಡಿ ಪರವಾಗಿಃ</u>

ವಾದಿ ನನ್ನ ತಾಯಿ. ನನ್ನ ಕೈಫೀಯತ್‌ನ ವಿಚಾರಗಳು ನನಗೆ ತಿಳಿದಿರುತ್ತವೆ. ಸಾಕ್ಷಿಗೆ ಈಗ ನಿಮ್ಮದ್ದು ಸ್ವಂತದು ಆಸ್ತಿಗಳು ಯಾವುವು ಆಗಿರುತ್ತವೆ ಎಂದು ಕೇಳಿದ್ದಕ್ಕೆ ಸಾಕ್ಷಿ ರಾಯಚೂರಿನ ಸೂಪರ್ ಮಾರ್ಕೆಟನಲ್ಲಿರುವ ಒಂದು ಕಾಂಪ್ಲೇಕ್ಸ್, ಕೃಷ್ಣದೇವರಾಯ ಲೇಔಟನಲ್ಲಿ ಒಂದು ಮನೆ, ಸುಲ್ತಾನಪುರ ಗ್ರಾಮದಲ್ಲಿ ಒಂದು ಹೊಲ ಇದೆ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಸುಲ್ತಾನಪುರ ಗ್ರಾಮದಲ್ಲಿರುವ ನಿಮ್ಮ ಸದರಿ ಹೊಲದ ಸರ್ವೆ ನಂಬರ ಏನು ಎಂದು ಕೇಳಿದ್ದಕ್ಕೆ ಸಾಕ್ಷಿ 44 ಎಂದು ಹೇಳುತ್ತಾರೆ. ಸದರಿ ಸರ್ವೆ ನಂಬರನ ವಿಸ್ತೀರ್ಣ 23 ಎಕರೆ 7 ಗುಂಟೆ ಇರಬಹುದು. ಸಾಕ್ಷಿಗೆ ಈಗ ಈ ಮೇಲೆ ಹೇಳಿರುವ ಸ್ವತ್ತುಗಳು ನೀವು ಸ್ವಂತದ್ದಾಗಿ ಖರೀದಿ ಮಾಡಿರುತ್ತೀರಾ ಎಂದು ಕೇಳಿದ್ದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ಸ್ವತ್ತುಗಳು ನಿಮ್ಮ ಹೆಸರಿನಲ್ಲಿ ಖರಿದಿ ಮಾಡಲಾಗಿರುತ್ತವೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಒದಗಿಸಿರುತ್ತೀರಾ ಎಂದು ಕೇಳಿದ್ದಕ್ಕೆ ಸಾಕ್ಷಿ ತಮಗೆ ಗೊತ್ತಿರುವುದಿಲ್ಲ ಕೇಳಬೇಕೆಂದು ಹೇಳುತ್ತಾರೆ. ಸಾಕ್ಷಿಗೆ ಈಗ ಮೂಲ 1 ನೇ ಪ್ರತಿವಾದಿಯವರು 1972-73 ರಲ್ಲಿ ಡಿಪ್ಲೋಮಾ ಇನ್ ಎಲೆಕ್ಟ್ರಿಕಲ್ ಎಂದು ಮಾಡಿರುತ್ತಾರೆ ಎಂದು ಹೇಳಿದ್ದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ಮೂಲ 1 ನೇ ಪ್ರತಿವಾದಿಯು ಇವರು 1977-78 ರಲ್ಲಿ ಕ್ಲಾಸ್ ಒನ್ ಕಾಂಟ್ರ್ಯಾಕ್ಟರ ಎಂದು ಕೆಲಸ ಮಾಡುತ್ತಿದ್ದರು ಎಂದು ಹೇಳಿದ್ದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿಯವರಿಗೆ ಕಾಂಟ್ರ್ಯಾಕ್ಟರ ಕೆಲಸ ಹಾಗೂ ಊರಲ್ಲಿ ಒಂದು ಹೊಲ ಮನೆ ಬಿಟ್ಟರೆ ಯಾವುದೇ ಆಸ್ತಿ ಇರಲಿಲ್ಲ ಎಂದು ಹೇಳಿದ್ದಕ್ಕೆ ಸಾಕ್ಷಿ ಕಿರಾಣಿ ಅಂಗಡಿ ಇತ್ತು ಎಂದು ಹೇಳುತ್ತಾರೆ. ಸದರಿ ಕಿರಾಣಿ ಅಂಗಡಿಯನ್ನು ವಾದಿ

ನಡೆಸಿಕೊಂಡು ಹೋಗುತ್ತಿದ್ದರು. ಸಾಕ್ಷಿಗೆ ಈಗ ದಾವ ಅನೂಸೂಚಿ-ಸಿ ಇದು ನಿಮ್ಮ ಸ್ವಯಾರ್ಜಿತ ಸ್ವತ್ತು ಆಗಿರುವುದಿಲ್ಲ ಎಂದು ಹೇಳಿದ್ದಕ್ಕೆ ಸಾಕ್ಷಿ ಸರಿಯಲ್ಲ ಎಂದು ಹೇಳುತ್ತಾರೆ.

ಪಾಟೀ ಸವಾಲುಃ ಶ್ರೀ ಎಂ. ಜೆಡ್. ಪಿ., ಮಾನ್ಯ ವಕೀಲರಿಂದ **6** ನೇ ಪ್ರತಿವಾದಿಯ ಪರವಾಗಿಃ

ಮಾನ್ಯ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ಹೇಳುತ್ತಾರೆ.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನೆಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿ ಕೊಂಡಿರುತ್ತಾರೆ.)**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**